ನಿರ್ದೇಶಕರ ಕಛೇರಿ
ಪೌರಾಡಳಿತ ನಿರ್ದೇಶನಾಲಯ

ಕರ್ನಾಟಕ ಸರ್ಕಾರ

ದೂರವಾಣಿ:080- 22867172 / 22866302
ಫ್ಯಾಕ್ಸ್: 080-22863576 / 22866302
Email: dmablr@gmil.com
9ನೇ ಮಹಡಿ, ವಿಶ್ವೇಶ್ವರಯ್ಯ ಗೋಪುರ,
ಡಾ॥ ಅಂಬೇಡ್ಕರ್ ವೀಧಿ, ಬೆಂಗಳೂರು 560001.

ಸಂ:14017/ಡಿಎಂಎ/51/ಜಿಎಂಐಎಸ್ಸಿ/2015-16 ದಿನಾಂಕ: .12.2020

ಇವರಿಗೆ,
ರಾಜ್ಯದ ಜಿಲ್ಲಾನಗರಾಭಿವೃದ್ಧಿ ಕೋಶದ
ಯೋಜನಾ ನಿರ್ದೇಶಕರುಗಳು

ಮಾನ್ಯರೆ,

ವಿಷಯ: 2020-21ನೇ ಸಾಲಿನಲ್ಲಿ ಶಾಲೆಯಿಂದ ಹೊರಗುಳಿದ ಮಕ್ಕಳನ್ನು ಶಾಲಾ ಮುಖ್ಯವಾಹಿನಿಗೆ ತರುವ ಕುರಿತಂತೆ ಸಮೀಕ್ಷೆ ನಡೆಸಲು ಪೂರ್ವಸಿದ್ಧತೆ ಬಗ್ಗೆ.

ಉಲ್ಲೇಖ:1.ಈ ಕಛೇರಿ ಸಮಸಂಖ್ಯೆ ಅ.ಜ್ಞಾಪನ ದಿನಾಂಕ:07.11.2020
2.ಈ ಕಛೇರಿ ಸಮಸಂಖ್ಯೆ ಪತ್ರ ದಿನಾಂಕ:27.11.2020
3.ಸರ್ಕಾರದ ಸುತ್ತೋಲೆ ಸಂ:ನಅಇ/202/ಎಂಡಬ್ಲ್ಯೂಪಿ/2019 ದಿ:24.2.2020

------

ರಾಜ್ಯದ ಎಲ್ಲಾ ಮಹಾನಗರಪಾಲಿಕೆಗಳು ಹಾಗೂ ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿನ ಶಾಲೆಯಿಂದ ಹೊರಗುಳಿದ ಮಕ್ಕಳನ್ನು ಶಾಲಾ ಮುಖ್ಯವಾಹಿನಿಗೆ ತರುವ ಕುರಿತಂತೆ ಇ-ಗವರ್ನೆನ್ಸ್ ವತಿಯಿಂದ ಅಭಿವೃದ್ಧಿಪಡಿಸಿರುವ ಮೊಬೈಲ್ ಅಪ್ಲಿಕೇಶನ್ ಮುಖಾಂತರ ಸಮೀಕ್ಷೆ ಕಾರ್ಯ ನಡೆಸುವ ಬಗ್ಗೆ ಜಿಲ್ಲಾನಗರಾಭಿವೃದ್ಧಿ ಕೋಶ, ಮಹಾನಗರಪಾಲಿಕೆ ಹಾಗೂ ನಗರಸಭೆಗಳ ಸೀನಿಯರ್ ಪ್ರೊಗ್ರಾಮರ್‌ಗಳನ್ನು ಮಾಸ್ಟರ್ ಟ್ರೈನರ್‌ಗಳನ್ನಾಗಿ ಗುರುತಿಸಿ ಉಲ್ಲೇಖ(1)ರನ್ವಯ ತರಬೇತಿ ನೀಡಲಾಗಿದ್ದು, ಎಲ್ಲಾ ಮಹಾ ನಗರಪಾಲಿಕೆ ಹಾಗೂ ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಸಮೀಕ್ಷೆ ನಡೆಸಲು ಸಮೀಕ್ಷೆದಾರರನ್ನು ಗುರುತಿಸಿ ತರಬೇತಿ ನೀಡಲು ಉಲ್ಲೇಖ(2)ರ ಪತ್ರದಲ್ಲಿ ಸೂಚಿಸಲಾಗಿರುತ್ತದೆ.

ಪ್ರಸ್ತುತ 2020-21ನೇ ಸಾಲಿನಲ್ಲಿ ರಾಜ್ಯದ ಎಲ್ಲಾ ಮಹಾನಗರಪಾಲಿಕೆಗಳು ಹಾಗೂ ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿನ ಶಾಲೆಯಿಂದ ಹೊರಗುಳಿದ ಮಕ್ಕಳ ಸಮೀಕ್ಷೆಯನ್ನು ಕೈಗೊಳ್ಳುವ ಸಲುವಾಗಿ ಈ ಕೆಳಕಂಡ ಸೂಚನೆಗಳನ್ವಯ ಕ್ರಮವಹಿಸಲು ಸೂಚಿಸಿದೆ.

- ಸಮೀಕ್ಷೆಯನ್ನು ಸೆಂಟರ್ ಫಾರ್ ಇ-ಗವರ್ನೆನ್ಸ್ ಇಲಾಖಾ ವತಿಯಿಂದ ಅಭಿವೃದ್ಧಿಪಡಿಸಿ Karnataka Government App Store ನಲ್ಲಿರುವ **"Karnataka H2H Children Survey App"** ಎಂಬ ಮೊಬೈಲ್ ಆಪ್ ಮುಖಾಂತರ ನಡೆಸುವುದು.
- ನಿರ್ದೇಶನಾಲಯದ ದಿನಾಂಕ:04.12.2020ರ ಪತ್ರದಲ್ಲಿ ವಿವರಿಸಿರುವಂತೆ ಸಮೀಕ್ಷೆದಾರರು ಉಪಯೋಗಿಸಬೇಕಾದ Mobile Specification ನ ವಿವರವನ್ನು ತಿಳಿಸಿದ್ದು, ಅದೇ Specification ನ ಮೊಬೈಲ್ ಹೊಂದಿರುವಂತಹ ನಗರ ಸ್ಥಳೀಯ ಸಂಸ್ಥೆಯ ಸಿಬ್ಬಂದಿ, ಅಂಗನವಾಡಿ ಕಾರ್ಯಕರ್ತರು, ಸ್ವ-ಸಹಾಯ ಗುಂಪುಗಳ ಸದಸ್ಯರು ಮತ್ತು ಎನ್.ಜಿ.ಒ.ಗಳ ಸದಸ್ಯರನ್ನು ನಿಯೋಜಿಸುವುದು.
- ಪ್ರತಿ ವಾರ್ಡಿಗೆ ಒಬ್ಬರಂತೆ ಸಮೀಕ್ಷೆದಾರರನ್ನು ನೇಮಿಸುವುದು

- ಸಮೀಕ್ಷೆದಾರರಿಗೆ ಒಂದು ಕುಟುಂಬ ಸಮೀಕ್ಷೆಗೆ ರೂ.5.00 ನಿಗಧಿಪಡಿಸಿದ್ದು, ಪ್ರತಿ ಸಮೀಕ್ಷೆದಾರರು ಪ್ರತಿ ದಿನ 50 ಕುಟುಂಬಗಳ ಸಮೀಕ್ಷೆ ಮಾಡುವುದು. ಸಮೀಕ್ಷೆಗೆ ತಗಲುವ ವೆಚ್ಚವನ್ನು ನಗರ ಸ್ಥಳೀಯ ಸಂಸ್ಥೆಯ ಸ್ವಂತ ನಿಧಿಯಿಂದ ಭರಿಸುವುದು.
- ಸಮೀಕ್ಷೆದಾರರಿಗೆ ನಗರ ಸ್ಥಳೀಯ ಸಂಸ್ಥೆಯ ಮಟ್ಟದಲ್ಲಿ ಗುರುತಿಸಲಾದ ಮಾಸ್ಟರ್ ಟ್ರೈನರ್ಸ್ ಮುಖಾಂತರ ತರಬೇತಿಯನ್ನು ನೀಡುವುದು.
- ನಗರ ಸ್ಥಳೀಯ ಸಂಸ್ಥೆಗಳ ಸಿಬ್ಬಂದಿಗಳ ಲಭ್ಯತೆಯ ಆಧಾರದ ಮೇಲೆ ವಾರ್ಡ್‌ಗುಂಪುಗಳಿಗೆ ಮೇಲ್ವಿಚಾರಕರನ್ನು ನೇಮಕ ಮಾಡುವುದು. ಮೇಲ್ವಿಚಾರಕರು ಸಮೀಕ್ಷೆಯಲ್ಲಿ ಯಾವುದೇ ಲೋಪದೋಷಗಳುಂಟಾಗದಂತೆ ನಿಗದಿತ ಅವಧಿಯಲ್ಲಿ ಸಮೀಕ್ಷೆ ಆಗುತ್ತಿರುವ ಬಗ್ಗೆ ಖಾತರಿಪಡಿಸಿ ಮೇಲ್ವಿಚಾರಣಾ ಕಾರ್ಯ ನಡೆಸುವುದು.
- ಸಮೀಕ್ಷೆ ಕಾರ್ಯದಲ್ಲಿ Mobile App ಬಳಕೆ ಕುರಿತಂತೆ ಯಾವುದೇ ಮಾಹಿತಿ/ಪ್ರಶ್ನೆಗಳಿದ್ದಲ್ಲಿ ರಾಜ್ಯಮಟ್ಟದ ಸಹಾಯವಾಣಿ : 8448445014 ನ್ನು ಸಂಪರ್ಕಿಸಬಹುದು.
- ಪೌರಾಡಳಿತ ನಿರ್ದೇಶನಾಲಯದ ಕೇಂದ್ರ ಸ್ಥಾನಿಕ ಸಹಾಯಕರು ಸದರಿ ಪ್ರಕ್ರಿಯೆಗೆ ರಾಜ್ಯಮಟ್ಟದ ನೋಡಲ್ ಅಧಿಕಾರಿಯಾಗಿದ್ದು, ಸಮೀಕ್ಷೆಗೆ ಸಂಬಂಧಿಸಿದಂತೆ ಯಾವುದೇ ವಿಚಾರಗಳಿದ್ದಲ್ಲಿ ಕೇಂದ್ರ ಸ್ಥಾನಿಕ ಸಹಾಯಕರನ್ನು ಸಂಪರ್ಕಿಸುವುದು.
- ಜಿಲ್ಲಾಮಟ್ಟದಲ್ಲಿ ಜಿಲ್ಲಾನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕರನ್ನು ಜಿಲ್ಲಾ ನೋಡಲ್ ಅಧಿಕಾರಿಗಳನ್ನಾಗಿ ನೇಮಿಸಿದ್ದು, ಈ ಸಮೀಕ್ಷೆಯನ್ನು ಮಾನ್ಯ ಉಚ್ಚನ್ಯಾಯಾಲಯದ ಆದೇಶದನ್ವಯ ಕೈಗೊಳ್ಳಲಾಗುತ್ತಿರುವುದರಿಂದ ಯಾವುದೇ ಲೋಪದೋಷಗಳಿಗೆ ಆಸ್ಪದವಿಲ್ಲದಂತೆ ನಿಗದಿತ ಸಮಯದೊಳಗೆ ಯಶಸ್ವಿಯಾಗಿ ಮುಕ್ತಾಯಗೊಳಿಸಲು ಯೋಜನಾ ನಿರ್ದೇಶಕರು ಜವಾಬ್ದಾರರಾಗಿರುತ್ತಾರೆ.

ಈ ಸಮೀಕ್ಷೆ ಕಾರ್ಯವನ್ನು ದಿನಾಂಕ:21.12.2020 ರಿಂದ ಪ್ರಾರಂಭಿಸಬೇಕಾಗಬಹುದಾದ್ದರಿಂದ, ಈ ಬಗ್ಗೆ ಅತಿ ಶೀಘ್ರದಲ್ಲಿಯೇ ಸರ್ಕಾರದಿಂದ ಮಾರ್ಗಸೂಚಿಯನ್ನೊಳಗೊಂಡ ಸುತ್ತೋಲೆಯನ್ನು ಹೊರಡಿಸಲಾಗುತ್ತಿದ್ದು, ಸಮೀಕ್ಷೆ ಕಾರ್ಯವನ್ನು ಪ್ರಾರಂಭಿಸುವ ಬಗ್ಗೆ ಅಗತ್ಯ ಪೂರ್ವಭಾವಿ ಸಿದ್ಧತೆಗಳನ್ನು ಮಾಡಿಕೊಳ್ಳಲು ಸೂಚಿಸಿದೆ.

ತಮ್ಮ ವಿಶ್ವಾಸಿ,

ನಿರ್ದೇಶಕರು,
ಪೌರಾಡಳಿತ ನಿರ್ದೇಶನಾಲಯ,
ಬೆಂಗಳೂರು.